ಇಲಾಖೆ / ವಿಷಯ : DEPARTMENT / SUBJECT: ನಿಧಿ

ಪತ್ರಿಕೆಯ ಹೆಸರು : NAME OF THE NEWS PAPER: ಪ್ರಜಾವಾಣಿ ಕನ್ನಡ ದಿನಾಂಕ : DATE 16/6/12

ಬಾಯಿಚೂರು 403 | ವಿಜಯಪುರ 232

ಪಾಕ್ ಕಿಡ್ನಾಪ್ ನಾಟಕ

ಇಸ್ಲಾಮಾಬಾದ್‌ನಲ್ಲಿನ ದೂತಾವಾಸ ಕಚೇರಿಯ ಇಬ್ಬರ ಸೆರೆ ಭಾರತದ ಪ್ರತಿರೋಧಕ್ಕೆ ಬೆದರಿ ರಾತ್ರಿ ವೇಳೆಗೆ ಬಿಡುಗಡೆ

ನವದೆಹಲಿ: ಮೊದಲು ನಾಪತ್ತೆ, ಆಮೇಲೆ ತೀವ್ರ ಹುಡುಕಾಟದ ನಾಟಕ, ಪರಿಸ್ಥಿತಿ ಅವಲೋಕನದ ಸುಳ್ಳು ಹೇಳಿಕೆ, ಆನಂತರ ಬಂಧನದ ಪ್ರಸ್ತಾಪ ಮತ್ತು ಅಪಘಾತದ ಗಂಭೀರ ಆರೋಪ.... ರಾತ್ರಿ ವೇಳೆಗೆ ಇಬ್ಬರೂ ಬಿಡುಗಡೆ... ಸೋಮವಾರ ನಡೆದ ಪಾಕಿಸ್ತಾನದಲ್ಲಿರುವ ಭಾರತೀಯ ದೂತಾವಾಸ ಕಚೇರಿಯ ಇಬ್ಬರು ಸಿಬ್ಬಂದಿ ನಾಪತ್ತೆ ಪ್ರಕರಣದಲ್ಲಿ ಪಾಕಿಸ್ತಾನ ನಡೆದುಕೊಂಡ ಅನುಮಾನಾಸ್ಪದ ನಡೆ ಇದು!

ಭಾರತೀಯ ದೂತಾವಾಸ ಅಧಿಕಾರಿಗಳಿಗೆ ಚಾಲಕರಾಗಿ ಸೇವೆ ಸಲ್ಲಿಸುತ್ತಿರುವ ಭಾರತೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಯೋಧರನ್ನು ತಾನೇ ಬಂಧಿಸಿ, ಮೊದಲಿಗೆ ಅದನ್ನು ಹೇಳದೆ ಸುಮ್ಮನಿದ್ದು ಆನಂತರ ತಾನೇ ಬಂಧಿಸಿದ್ದಾಗಿ ಹೇಳಿದ್ದ ಪಾಕಿಸ್ತಾನದ ಧೂರ್ತತನ ವಿಶ್ವದ ಮುಂದೆ ಮತ್ತೆ ಸಾಬೀತಾಗಿದೆ. ನಾಟಕೀಯ ಬೆಳವಣಿಗೆಯಿಂದ ಕ್ಷುದ್ರಗೊಂಡು ಭಾರತ ನೀಡಿದ ಎಚ್ಚರಿಕೆಗೆ ಬೆದರಿದ ಪಾಕಿಸ್ತಾನ ಸೋಮವಾರ ರಾತ್ರಿ ವೇಳೆಗೆ ಇಬ್ಬರನ್ನೂ ಬಿಡುಗಡೆ ಮಾಡಿದೆ. ಆದರೆ, ಇವರಿಬ್ಬರ ದೇಹದಲ್ಲಿ ಕೆಲವು ಗಾಯಗಳ ಗುರುತು ಇದೆ ಎಂದು ಹೈಕಮಿಷನರ್ ಕಚೇರಿಯ ಅಧಿಕಾರಿಗಳು ಹೇಳಿದ್ದಾರೆ. ಅಷ್ಟೇ ಅಲ್ಲ ಯಾವುದೇ ವಿಚಾರಣೆ ನಡೆಸಕೂಡದು, ಹಿಂಸೆ ಮಾಡಕೂಡದು ಎಂಬ ಭಾರತದ ತೀಕ್ಷ್ಣ ಮಾತುಗಳಿಗೂ ಪಾಕಿಸ್ತಾನ ಬೆದರಿದೆ.

ಏನಾಗಿತ್ತು?: ಅದು ಬೆಳಗ್ಗೆ 8:30. ಇಸ್ಲಾಮಾಬಾದ್‌ನಲ್ಲಿರುವ ದೂತಾವಾಸದ ಕಚೇರಿಯ ಸಿಬ್ಬಂದಿಗೂ ಸಂಪರ್ಕಕ್ಕೆ ಸಿಗಲಿಲ್ಲ. ಭಾರತದ ವಿದೇಶಾಂಗ ಇಲಾಖೆ, ನವದೆಹಲಿಯಲ್ಲಿರುವ ಪಾಕ್ ಹೈ ಕಮೀಷನ್‌ರ ಮೂಲಕ ಪಾಕ್ ಸರ್ಕಾರಕ್ಕೆ ಈ ವಿಷಯ ಮುಟ್ಟಿಸಿ, ವಿವರ ಸಲ್ಲಿಸುವಂತೆ ಕೇಳಿತು. ಆಗ, ಪಾಕಿಸ್ತಾನ ಹೇಳಿದ್ದು 'ಸಿಬ್ಬಂದಿ ನಾಪತ್ತೆ ಬಗ್ಗೆ ಗೊತ್ತಿಲ್ಲ.... ಈಗ ವಿಷಯ ನಮ್ಮ ಗಮನಕ್ಕೆ ಬಂದಿದೆ. ಅದನ್ನು ಪರಿಶೀಲಿಸುತ್ತಿದ್ದೇವೆ' ಅಂತ.

ಹಾಗೇ ಸಮಯ ಕಳೆಯಿತು. ಇತ್ತ ಭಾರತದಲ್ಲಿ ತಳಮಳ. ನಾಪತ್ತೆಯಾದ ಸಿಬ್ಬಂದಿ ಏನಾದರು, ಎಲ್ಲಿ ಹೋದರು ಎಂದು ಆತಂಕ ಮನೆ ಮಾಡಿದ್ದರೆ, ಅತ್ತ ಪಾಕಿಸ್ತಾನಿಯ ಅಧಿಕಾರಿಗಳು ಸಣ್ಣಗೆ ನಕ್ಕು ಚಹಾ, ಬಿಸ್ಕೇಟ್ ಸೇವಿಸಿಕೊಂಡು ಆರಾಮಾಗಿದ್ದರು. ಸಮಯ ಉರುಳಿ ಮಧ್ಯಾಹ್ನವಾಯಿತು, ಮಧ್ಯಾಹ್ನವೂ ಇಳಿದು ಹೋಗಿ ಸಂಜೆಯಾಗುತ್ತಿದ್ದರೂ ಪಾಕಿಸ್ತಾನ ಮಾತ್ರ ಆ ಅಧಿಕಾರಿಗಳ ಬಗ್ಗೆ ತುಟಿ ಪಿಟಕ್ಕೆನ್ನಲಿಲ್ಲ.

ಗೊತ್ತಾಗಿದ್ದು ಹೇಗೆ?: ನಾಪತ್ತೆಯಾದ ಅಧಿಕಾರಿಗಳು ಪಾಕಿಸ್ತಾನದ ಗುಪ್ತಚರ ಇಲಾಖೆಯಾದ ಐಎಸ್‌ಐ ವಶದಲ್ಲಿರುವುದನ್ನು ಪಾಕಿಸ್ತಾನ ಮಾಧ್ಯಮಗಳು ಬಹಿರಂಗಗೊಳಿಸಿದವು. ಸಂಜೆಯ ಹೊತ್ತಿಗೆ ಈ ವಿಚಾರ ಬಹಿರಂಗಗೊಂಡಿತು. ಆದರೆ, ಸಂಜೆ ಹೊತ್ತಿಗೆ, ರಾಜತಾಂತ್ರಿಕ ಸಿಬ್ಬಂದಿಯಿದ್ದ ಕಾರು ವ್ಯಕ್ತಿಯೊಬ್ಬನ ಮೇಲೆ ಹರಿದು ಆ ವ್ಯಕ್ತಿ ತೀವ್ರವಾಗಿ ಗಾಯಗೊಂಡಿರುವ ಹಿನ್ನೆಲೆಯಲ್ಲಿ ಇಸ್ಲಾಮಾಬಾದ್ ಪೊಲೀಸರು ಭಾರತದ ಇಬ್ಬರು ರಾಜತಾಂತ್ರಿಕ ಸಿಬ್ಬಂದಿಯನ್ನು ಬಂಧಿಸಿದ್ದಾರೆಂಬ ಸುದ್ದಿಗಳು ಹರಿದಾಡಿದವು. ಮಾಧ್ಯಮಗಳಲ್ಲಿ ಈ ವರದಿ ಬಿತ್ತರವಾಗುತ್ತಲೇ ಎಚ್ಚೆತ್ತುಕೊಂಡ ಪಾಕಿಸ್ತಾನ, ಹಿಟ್ ಆ್ಯಂಡ್ ರನ್ ಕೇಸ್‌ನಲ್ಲಿ ಅವರಿಬ್ಬರನ್ನೂ ಬಂಧಿಸಲಾಗಿದೆ. ವಾಹನ ಸಮೇತ ಅವರನ್ನು ದಸ್ತಗಿರಿ ಮಾಡಲಾಗಿದೆ ಎಂದು ಅಧಿಕೃತವಾಗಿ ಪ್ರಕಟಿಸಿತು.



- ಮೊದಲಿಗೆ ಸಿಬ್ಬಂದಿ ನಾಪತ್ತೆ ಬಗ್ಗೆ ಗೊತ್ತೇ ಇಲ್ಲ ಎಂದು ನಟಿಸಿದ ಪಾಕಿಸ್ತಾನ
- ಸಂಜೆ ಹೊತ್ತಿಗೆ ಸಿಬ್ಬಂದಿಯನ್ನು ಪೊಲೀಸರು ಬಂಧಿಸಿರುವುದಾಗಿ ಪ್ರಕಟ
- ವಾಹನ ಅಪಘಾತದ ಆರೋಪ
- ಕ್ಷುದ್ರಗೊಂಡ ಭಾರತದಿಂದ ಬಿಡುಗಡೆಗೆ ತಾಕೀತು, ಪಾಲಿಸಿದ ಪಾಕಿಸ್ತಾನ

ಎಚ್ಚರಿಸಿದ್ದ ಭಾರತ

ಪಾಕಿಸ್ತಾನದ ಅಧಿಕೃತ ಮಾಹಿತಿ ಹೊರಬೀಳುತ್ತಲೇ, ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಭಾರತದ ವಿದೇಶಾಂಗ ಇಲಾಖೆ, ಭಾರತದಲ್ಲಿರುವ ಪಾಕಿಸ್ತಾನ ಉಚ್ಚ ಹೈ ಕಮೀಷನರ್ ಸಯ್ಯದ್ ಹೈದರ್ ಶಾ ಅವರಿಗೆ ನೋಟಿಸ್ ಜಾರಿಗೊಳಿಸಿ, ಪಾಕ್ ಅಧಿಕಾರಿಗಳ ವಶದಲ್ಲಿರುವ ಭಾರತೀಯ ರಾಜತಾಂತ್ರಿಕ ಸಿಬ್ಬಂದಿಯನ್ನು ಯಾವುದೇ ವಿಚಾರಣೆ ಮಾಡಬಾರದು. ಯಾವುದೇ ರೀತಿಯಲ್ಲಿ ಹಿಂಸಿಸಬಾರದು. ಈ ಕೂಡಲೇ, ಅವರನ್ನು ಅವರ ವಾಹನ ಸಮೇತ ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ದೂತಾವಾಸ ಕಚೇರಿಗೆ ರವಾನಿಸಬೇಕು ಎಂದು ತಾಕೀತು ಮಾಡಿತ್ತು.

ಮುಯ್ಯಿಗೆ ಮುಯ್ಯಿ?

ವಾರದ ಹಿಂದೆ, ಭಾರತದಲ್ಲಿದ್ದ ಇಬ್ಬರು ಪಾಕಿಸ್ತಾನ ರಾಜತಾಂತ್ರಿಕರು ಗೂಢಚರ್ಯೆ ನಡೆಸುತ್ತಿದ್ದ ಆರೋಪದಡಿ ಭಾರತ, ನವದೆಹಲಿಯಲ್ಲಿನ ಪಾಕಿಸ್ತಾನ ರಾಯಭಾರ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದ ಅಬಿದ್ ಹುಸೇನ್ ಅಬಿದ್ (42) ಮೊಹಮ್ಮದ್ ತಾಹೀರ್ ಖಾನ್ (44) ಹಾಗೂ ಜಾವೇದ್ ಹುಸೇನ್ (36) ಎಂಬುವರನ್ನು ಭಾರತದಿಂದ ಉಚ್ಚಾಟಿಸಿತ್ತು. ಈ ಘಟನೆ ನಡೆದ ಬೆನ್ನಲ್ಲೇ, ಪಾಕಿಸ್ತಾನದಲ್ಲಿರುವ ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಯೊಬ್ಬರನ್ನು ಬಂಧಿಸಲಾಗಿದೆ ಎಂದು ವಿಚಾರಣೆ ನಡೆಸಿದ ಪಾಕಿಸ್ತಾನದ ಅಧಿಕಾರಿಗಳು ಅವರಿಗೆ ಮಾನಸಿಕ ಹಿಂಸೆ ನೀಡಿದ್ದರು. ಆನಂತರ, ಭಾರತೀಯ ರಾಯಭಾರಿ ಕಚೇರಿಯ ಮತ್ತೊಬ್ಬ ಅಧಿಕಾರಿಯಾದ ಗೌರವ್ ಅಹ್ಲುವಾಲಿಯಾ ಅವರನ್ನು ಪಾಕ್ ಹಿಂದೆ ಐಎಸ್‌ಐ ಅಧಿಕಾರಿಗಳು ಅವರು ಹೋದಲ್ಲಿ, ಬಂದಲ್ಲಿ ಹಿಂಬಾಲಿಸುತ್ತಿದ್ದರು. ಈಗ, ಅದರ ಬೆನ್ನಲ್ಲೇ ಇಬ್ಬರು ರಾಜತಾಂತ್ರಿಕ ಕಚೇರಿ ಸಿಬ್ಬಂದಿಗಳನ್ನು ಬಂಧಿಸಲಾಗಿದೆ.

ಅಪಘಾತದ ಕಥೆ ಸೃಷ್ಟಿಸಿದ್ದ ಪಾಕಿಸ್ತಾನ

'ಇಸ್ಲಾಮಾಬಾದ್‌ನ ಎಂಬೆಸಿ ರಸ್ತೆಯಲ್ಲಿ ಭಾರತೀಯ ಸಿಬ್ಬಂದಿ ಇದ್ದ ಬಿಎಂಡಬ್ಲ್ಯೂ ಕಾರು, ವ್ಯಕ್ತಿಯೊಬ್ಬರ ಮೇಲೆ ಹರಿಯಿತು. ಘಟನೆಯಲ್ಲಿ ವ್ಯಕ್ತಿಗೆ ಮಾರಣಾಂತಿಕ ಗಾಯವಾಗಿದೆ. ಅಪಘಾತ ನಡೆದ ತಕ್ಷಣ, ಸಿಬ್ಬಂದಿ ಘಟನಾ ಸ್ಥಳದಿಂದ ಪರಾರಿಯಾಗಲೆತ್ನಿಸಿದ್ದಾರೆ. ಆ ಸಂದರ್ಭದಲ್ಲಿ ರಸ್ತೆಯಲ್ಲಿದ್ದ ಜನರು, ಕಾರನ್ನು ಅಡ್ಡಗಟ್ಟಿ ಸಿಬ್ಬಂದಿಯಿಬ್ಬರನ್ನೂ ಪೊಲೀಸರಿಗೆ ಒಪ್ಪಿಸಿದ್ದಾರೆ. ಪೊಲೀಸರು, ಅಪಘಾತಕ್ಕೆ ಕಾರಣವಾಗಿರುವ ಕಾರನ್ನು ವಶಪಡಿಸಿಕೊಂಡಿದ್ದಾರೆ. ಓವರ್ ಸ್ಪೀಡ್ ಹಾಗೂ ಬೇಜವಾಬ್ದಾರಿ ಕಾರು ಚಾಲನೆಯಿಂದಲೇ ಅಪಘಾತ ಸಂಭವಿಸಿದೆ' ಎಂದು ಪಾಕಿಸ್ತಾನದ ಜಿಯೋ ಮಾಧ್ಯಮ ಪ್ರಕಟಿಸಿತು. ಆದರೆ, ಇಲ್ಲೊಂದು ಸೋಜಿಗವಿದೆ. ಅದೇನೆಂದರೆ, ಅಪಘಾತದ ಬಗ್ಗೆ ಯಾವುದೇ ಪಾಕಿಸ್ತಾನದ ಅಧಿಕಾರಿ ಅಧಿಕೃತ ಹೇಳಿಕೆ ನೀಡಿರಲಿಲ್ಲ. ಅತ್ತ, ಇಸ್ಲಾಮಾಬಾದ್‌ನಲ್ಲಿರುವ ಭಾರತೀಯ ದೂತಾವಾಸ ಕಚೇರಿಗೂ ಆ ಬಗ್ಗೆ ಮಾಹಿತಿ ಕೊಟ್ಟಿರಲಿಲ್ಲ.

ಪಾಕಿಸ್ತಾನಕ್ಕೆ ನೀರು ಬಿಡಲ್ಲ

ಭಾರತದ ಪ್ರಮುಖ ಮೂರು ನದಿಗಳಿಂದ ಪಾಕಿಸ್ತಾನಕ್ಕೆ ಹರಿದುಹೋಗುತ್ತಿರುವ ನೀರನ್ನು ನಮ್ಮಲ್ಲೇ ಉಳಿಸಿಕೊಳ್ಳುವ ಪ್ರಯತ್ನಗಳಿಗೆ ಚಾಲನೆ ನೀಡಲಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ. ಗುಜರಾತ್‌ನ ಬಿಜೆಪಿ ಕಾರ್ಯಕರ್ತರು ಹಾಗೂ ಬೆಂಬಲಿಗರಿಗಾಗಿ ಆಯೋಜಿಸಲಾಗಿದ್ದ ವರ್ಚುವಲ್ ರ‍್ಯಾಲಿಯಲ್ಲಿ ಮಾತನಾಡಿದ ಅವರು,

"ಭಾರತ- ಪಾಕಿಸ್ತಾನ ಭೂಭಾಗದಲ್ಲಿ ಒಟ್ಟು ಆರು ನದಿಗಳು ಹರಿಯುತ್ತವೆ. ದೇಶ ವಿಭಜನೆಯಾದಾಗ ಆದ ಒಪ್ಪಂದದಂತೆ ಆರು ನದಿಗಳಲ್ಲಿ ಮೂರು ನದಿಗಳ ನೀರಿನಲ್ಲಿ ಇಂತಿಷ್ಟು ನೀರನ್ನು ಪಾಕಿಸ್ತಾನಕ್ಕೆ ಬಿಡಬೇಕಿದೆ. ಆದರೆ, ಉಳಿದ ಮೂರು ನದಿಗಳ ನೀರೂ ಕೂಡ ಪಾಕಿಸ್ತಾನಕ್ಕೆ ಹರಿದು ಹೋಗುತ್ತಿವೆ. ಹಾಗಾಗಿ, ಒಪ್ಪಂದದಲ್ಲಿ ಇಲ್ಲದ ನದಿಗಳ ನೀರನ್ನು ಭಾರತದ ಕಡೆಗೇ ತಿರುಗಿಸಿಕೊಳ್ಳಲು ನಿರ್ಧರಿಸಲಾಗಿದ್ದು ಆ ಕುರಿತಂತೆ ಸರ್ಕಾರ ಕಾರ್ಯೋನ್ಮುಖವಾಗಿದೆ" ಎಂದು ತಿಳಿಸಿದ್ದಾರೆ.